**MVC-129/2021** **ಪಿ.ಡಬ್ಲ್ಯೂ-1 (ಬಿ.ರಾಘವೆಂದ್ರ)**

ದಿನಾಂಕಃ **21.04.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್.ಸಿ.ಜೆ. ವಕೀಲರಿಂದಃ</u>**

ನಾನು ಅವಿದ್ಯಾವಂತ. ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಜೂನ್ 2018 ರಲ್ಲಿ ಅಪಘಾತವಾಗಿರುತ್ತದೆ. ನನ್ನ ಬಾಬ್ತು ಎತ್ತಿನಗಾಡಿಯಲ್ಲಿ ಅರ್ಧ ಭಾಗ ಮಣ್ಣು ತುಂಬಿಸಿಕೊಂಡು ಹೋಗುತ್ತಿದ್ದೆ. ಅಪಘಾತಕಕ್ಕಿಂತ ಎರಡು ತಿಂಗಳು ಮೊದಲು ಎತ್ತಿನಗಾಡಿಯನ್ನು ತೆಗೆದುಕೊಂಡಿರುತ್ತೇನೆ. ಎತ್ತಿನಗಾಡಿಗೆ ಹಸುಗಳನ್ನು ಬಳಸುತ್ತಿದ್ದೆನು. ಅಪಘಾತಕ್ಕೂ 4-5 ತಿಂಗಳು ಮೊದಲು ಹಸುಗಳನ್ನು ಕೊಡಗಳ್ಳಿ ಎಂಬಲ್ಲಿ 2018 ರಲ್ಲಿ ರೂ.150000/- ಹಣಕ್ಕೆ ಖರೀದಿಸಿರುತ್ತೇನೆ. ಖರೀದಿ ಸಂಬಂಧ ಯಾವುದೇ ದಾಖಲೆ ಮಾಡಿಕೊಂಡಿರುವುದಿಲ್ಲ. ಆ ದಿನ ಬಾಬುರಾಯನ ಕೊಪ್ಪಲಿನಿಂದ ಪಶ್ಚಿಮ ವಾಹಿನಿ ಕಡೆಗೆ ಮಣ್ಣು ತುಂಬಿಕೊಂಡು ಎತ್ತಿನಗಾಡಿಯಲ್ಲಿ ಹೋಗುತ್ತಿದ್ದೆ. ಲಾರಿಯು ಬೆಂಗಳೂರಿನ ಕಡೆಯಿಂದ ಬರುತ್ತಿತ್ತು. ಅಪಘಾತ ಸ್ಥಳದಲ್ಲಿ ತಿರುವು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಗಂಜಾಂ ಕಡೆಗೆ ತಿರುವು ಇರುತ್ತದೆ, ಆದರೆ ನಾನು ಆ ದಿನ ನೇರವಾಗಿ ಹೋಗುತ್ತಿದ್ದೆನು ಎಂದು ನುಡಿಯುತ್ತಾರೆ. ಲಾರಿಯ ಚಾಲಕ ನಿಧಾನವಾಗಿ ಚಲಾಯಿಸಿಕೊಂಡು ಬಂದಿರುತ್ತಾರೆ, ಆದರೆ ನನ್ನ ಅಜಾಗರೂಕತೆಯಿಂದಲೇ ಎತ್ತಿನಗಾಡಿಯನ್ನು ಏಕಾಏಕಿ ತಿರುವು ರಸ್ತೆಯಲ್ಲಿ ತಿರುಗಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

2. ದೂರನ್ನು ಅದೇ ದಿನ ನಾನೇ ಕೊಟ್ಟಿರುತ್ತೇನೆ. ಅಪಘಾತದಿಂದ 1 ಎತ್ತಿನ ಕೊಂಬುಗಳು ಅಲುಗಾಡುತ್ತಿತ್ತು, ಮಾಂಸ ಖಂಡಗಳಿಗೆ ನೋವಾಗಿರುತ್ತದೆ, ಮತ್ತೊಂದು ಎತ್ತಿಗೆ ಗಾಯವಾಗಿತ್ತು. ನನಗೆ ಏನು ಗಾಯ ಆಗಿರಲಿಲ್ಲ. ಶ್ರೀರಂಗಪಟ್ಟಣದ ಪಶುಸಂಗೋಪನೆ ಆಸ್ಪತ್ರೆಯಲ್ಲಿ ಎತ್ತುಗಳಿಗೆ ಚಿಕಿತ್ಸೆ

ಕೊಡಿಸಿದಾಗಲೂ ಸಹ ಫಲಕಾರಿಯಾದ ಹಿನ್ನೆಲೆಯಲ್ಲಿ ಒಂದು ಎತ್ತನ್ನು ಗೋಶಾಲೆಗೆ ಬಿಟ್ಟಿರುತ್ತೇನೆ. ಇನ್ನೊಂದು ಎತ್ತು ಆಗಾಗ ರೋಗಕ್ಕೆ ತುತ್ತಾಗುತ್ತಿತ್ತು. ಆದುದರಿಂದ ಅದನ್ನು ಮಾರಾಟ ಮಾಡಿರುತ್ತೇನೆ. ಎತ್ತುಗಳಿಗೆ ಚಿಕಿತ್ಸೆ ಕೊಡಿಸಿದ ನಂತರ ಒಂದನ್ನು ಗೋಶಾಲೆಗೆ ಬಿಡಲಾಯಿತು ಮತ್ತು ಮತ್ತೊಂದನ್ನು ಮಾರಾಟ ಮಾಡಲಾಯಿತು ಎಂಬ ವಿಚಾರವನ್ನು ನನ್ನ ಪ್ರಮಾಣ ಪತ್ರಿಕೆಯಲ್ಲಿ ಬರೆಸಿಲ್ಲ ಎಂದರೆ ಗೊತ್ತಿಲ್ಲ. ಎತ್ತು ಮತ್ತು ಗಾಡಿಯನ್ನು ಬಳಸಿ ತಿಂಗಳಿಗೆ ರೂ.18000/- ಸಂಪಾದಿಸುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ಬಿಲ್ಲನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪಶುವೈದ್ಯಾಧಿಕಾರಿಗಳು ಎತ್ತುಗಳಿಗೆ ಉಂಟಾದ ಗಾಯಗಳ ಕುರಿತು ಪ್ರಮಾಣ ಪತ್ರ ನೀಡಿರುತ್ತಾರೆ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರ ಜೊತೆ ಷರೀಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**